## ಎರಡು ತಪ್ಪುಗಳು

ಆ. 27ರ ಸಂಚಿಕೆಯಲ್ಲಿ ವಸುಂಧರಾ ಕದಲೂರು ಅವರ 'ಎರಡು ತಪ್ಪುಗಳು' ಕತೆಯು ಮಹಾಭಾರತ ಆಧುನಿಕ ದ್ರೌಪದಿಯ ಮನಸ್ಸಿನ ಪ್ರತಿಬಿಂಬ. ಹೆಣ್ಣಿಗೂ ಒಂದು ಮನಸ್ಸಿದೆ, ಭಾವನೆಯಿದೆ, ಅಂತರ್ಯವಿದೆ, ಹಿರಿಯರೊಂದಿಗೆ ಪ್ರಶ್ನಿಸುವ ಅಧಿಕಾರವೂ ಇದೆ ಎಂಬುದನ್ನು ನಿರೂಪಿಸಿದೆ. ಹಲವರು ಹೇಳಲು, ಆಡಲು ಧೈರ್ಯವಾಗದೆ ಸುಮ್ಮನಿರುವ ಸಂಗತಿಗಳನ್ನು ಕತೆಗಾರ್ತಿ ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

–ಸತ್ಯವತಿ ರಾಘವೇಂದ್ರ, ಚಿಕ್ಕಮಗಳೂರು, ಅಶೋಕ

'ಎರಡು ತಪ್ಪುಗಳು' ಕಥೆ ಹಾಸ್ಯಾಸ್ಪದವಾಗಿದೆ. ತಾನು ಏನು ಬರೆದರೂ ಓದುಗರು ಒಪ್ಪಿಕೊಳ್ಳುತ್ತಾರೆ ಎಂದು ಲೇಖಕಿ ತಿಳಿದುಕೊಂಡಿರುವಂತಿದೆ. ಮಹಾಭಾರತದ ಬಗ್ಗೆ ಏನಾದರೂ ಬರೆಯುವ ಮುನ್ನ ನೀವು ಮಹಾಭಾರತವನ್ನು ಪೂರ್ತಿಯಾಗಿ ಓದಬೇಕು ಅಥವಾ ಅದರ ಬಗ್ಗೆ ಪ್ರಾಜ್ಞರು ನೀಡಿದ ವ್ಯಾಖ್ಯಾನವನ್ನಾದರೂ ಎಚ್ಚರಿಕೆಯಿಂದ ಕೇಳಿಸಿಕೊಳ್ಳಬೇಕು. ಅಂಥ ಕೆಲವು ವ್ಯಾಖ್ಯಾನಗಳು ಯೂಟ್ಯೂಬ್‌ನಲ್ಲಿಯೂ ಲಭ್ಯ ಇವೆ. ಎ.ವಿ. ಪ್ರಸನ್ನ ಅವರು ತಮ್ಮ ಗಮಕದಲ್ಲಿ ತುಂಬ ಅಧಿಕಾರಯುತವಾಗಿ ವಿವರಿಸಿದ್ದಾರೆ. ಕುವೆಂಪು ಮತ್ತು ಮಾಸ್ತಿ ಅವರು 'ಕರ್ನಾಟ ಭಾರತ ಕಥಾಮಂಜರಿ'ಗೆ ಬರೆದಿರುವ ಮುನ್ನುಡಿಯಲ್ಲಿ ಮಹಾಭಾರತದ ಮುಖ್ಯ ಪಾತ್ರಚಿತ್ರಣಗಳ ಕುರಿತು ಬರೆದಿದ್ದಾರೆ. ಓದಿ. ದಯವಿಟ್ಟು ಮಹಾಭಾರತದ ಶ್ರೇಷ್ಠ ಪಾತ್ರಗಳಿಗೆ ಇಂದಿನ ಮನುಷ್ಯನ ಭಾವನೆಗಳನ್ನು ಆರೋಪಿಸುವ ಪ್ರಯತ್ನ ಮಾಡಬೇಡಿ.



–ಎಂ. ಇ. ನಾಗೇಶ್

ಕಥೆ ಸುಂದರವಾಗಿ ಮೂಡಿಬಂದಿದೆ. ಮನದ ತುಮುಲವನ್ನು ದ್ರೌಪದಿ ಹೊರಗೆಡಹಿದ ರೀತಿಯನ್ನು ಲೇಖಕಿ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಮಹಾಭಾರತದಲ್ಲಿ ಯಾರು ಯಾರೋ ಹೀರೊ ಆಗಿ ಹೊರಹೊಮ್ಮಿರಬಹುದಾದರೂ ಆಗಿನ ರಾಜಕುಲದ ಅರಮನೆಯ ಸ್ತ್ರೀಯರ ಮನದಾಳವನ್ನು ಸರಿಯಾಗಿ ಎಲ್ಲೂ ಹೇಳಿಲ್ಲ. ಲೇಖಕಿ ಈ ಲೇಖನದಲ್ಲಿ ಅದರ ಕೊರತೆಯನ್ನು ತನ್ನ ಸುಂದರ ಶೈಲಿಯಲ್ಲಿ ಹೊರಗೆಡಹಿದ್ದಾರೆ. ಉಳಿದ ಸ್ತ್ರೀಯರ ಬಗ್ಗೆ ಕೂಡಾ ಹೀಗೇ ಒಂದೊಂದಾಗಿ ಬರೆಯಲಿ.

–ವಾಸುದೇವ್ ಭಟ್, ಉಡುಪಿ

ಮಹಾಭಾರತದ ತುಂಬ ಪ್ರಬುದ್ಧವಾದ ಇಬ್ಬರು ಹೆಣ್ಣುಗಳ ನಡುವಿನ ವಿಶ್ಲೇಷಣೆ, ವಾಹ್! ಸೊಗಸಾಗಿದೆ. ಹೆಣ್ಣಿನ ಅಂತರಂಗ ಕೇವಲ ಇನ್ನೊಂದು ಹೆಣ್ಣಿಗಷ್ಟೇ ಅರ್ಥವಾಗುವ ಸತ್ಯ ತಾನೇ?

–ಶ್ರೀರಾಂ, ಸಂಚಾರ್ ನಗರ

ದ್ರೌಪದಿಯ ಅಂತರಂಗವನ್ನು ಅದ್ಭುತವಾಗಿ ತೆರೆದಿಡುತ್ತದೆ. ಮನದ ಬೇಗುದಿ, ಅವಮಾನ, ನೋವು ಸಂಕಟಗಳ ನಡುವೆ ಕುಂತಿಯ ಕಾಳಜಿ ಮನ ತಟ್ಟುತ್ತದೆ.

–ಸುಮಾ ಗುರುರಾಜ್

ಕಥೆ, ದ್ರೌಪದಿಯ ಒಳಗುದಿಯನ್ನು ಅನಾವರಣಗೊಳಿಸುತ್ತದೆ. ಆಕೆಯ ಪ್ರಶ್ನೆಗಳಿಗೆ ಅತ್ತೆ ಕುಂತಿ ಮಾತೆ ಉತ್ತರಿಸಲಾರದ ಸ್ಥಿತಿಯ ಜೊತೆಗೆ ಅಂದಿನ ಕಟ್ಟಳೆಯ ಬಿಗುವನ್ನು ಚೆನ್ನಾಗಿ ಮನದಟ್ಟು ಮಾಡಿದೆ.

–ಶಂಕರೇಗೌಡ ತುಂಬಕೆರೆ, ಮಂಡ್ಯ

## ಎಚ್ಚೆಸ್ಕೆ...

ಆ. 27ರ ಸಂಚಿಕೆಯಲ್ಲಿ ಎಚ್ಚೆಸ್ಕೆ ಕುರಿತು ಎಂ. ಎಸ್. ನರಸಿಂಹ ಮೂರ್ತಿಯವರ ಲೇಖನ ಬಹಳ ಚೆನ್ನಾಗಿದೆ. ಹಳೆಯೂರಿನಲ್ಲಿ ವೃತ್ತಪತ್ರಿಕೆಯ ವಿತರಕ ಹಾಗೂ ವರದಿಗಾರರಾಗಿ ಕೆಲಸ ಮಾಡುತ್ತಾ ಓದನ್ನೂ ಮುಂದುವರೆಸಿದವರು ಎಚ್ಚೆಸ್ಕೆ. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸಮಾಡುತ್ತಿದ್ದಾಗ ಆಡಳಿತ ವರ್ಗ ವಿಶೇಷವಾಗಿ ಬಿ.ವಿ. ಬನುಮಯ್ಯ ಅವರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಕೆಲಸ ಬಿಡಬೇಕಾಯ್ತು. ಕನ್ನಡದಲ್ಲಿ ವ್ಯಾವಹಾರಿಕ ಪತ್ರವ್ಯವಹಾರವನ್ನು ಮಾಡಲು ಸಾಧ್ಯವೇ ಎನ್ನುವ ಕಾಲದಲ್ಲಿ ಅವರು ವ್ಯಾವಹಾರಿಕ ಕನ್ನಡವನ್ನು ಕನ್ನಡಿಗರ ಕೈಲಿಟ್ಟು ಏಕೆ ಸಾಧ್ಯವಿಲ್ಲ ನೋಡಿ ಎಂದು ಸವಾಲೆಸೆದರು.

–ಕೊ.ಸು.ನರಸಿಂಹ ಮೂರ್ತಿ, ಮೈಸೂರು

ಸುಧಾ ಪತ್ರಿಕೆಯ ಆರಂಭದ ದಿನಗಳಿಂದಲೂ 'ಎಚ್ಚೆಸ್ಕೆ' ಅವರ 'ವಾರದಿಂದ ವಾರಕ್ಕೆ' ಮತ್ತು 'ವಾರದ ವ್ಯಕ್ತಿ' ಅಂಕಣಗಳನ್ನು ತಪ್ಪದೇ ಓದುತ್ತಿದ್ದೆ.

–ಪ್ರಭಾಪ್ರಸಾದ್, ಬೆಂಗಳೂರು

ಎಚ್ಚೆಸ್ಕೆ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿನ ಲೇಖನ ಆಪ್ತವಾಗಿತ್ತು. ಸುಧಾದಲ್ಲಿ ಬರುತ್ತಿದ್ದ ಅವರ 'ವಾರದ ವ್ಯಕ್ತಿ' ಅಂಕಣ ಮರೆಯುವಂತೆಯೇ ಇಲ್ಲ. ತುಂಡು ತುಂಡು ಮೊನಚು ವಾಕ್ಯಗಳು, ಸ್ವಲ್ಪ ಪದಗಳಲ್ಲೇ ವ್ಯಕ್ತಿಗಳ ವ್ಯಕ್ತಿತ್ವವನ್ನು ಕಟ್ಟಿಕೊಡುವ ರೀತಿ ಅನನ್ಯ. ಭುಟ್ಟೋ ಕುರಿತ ಅವರ ವಾರದವ್ಯಕ್ತಿ ಆರಂಭ ಹೀಗಿತ್ತು. 'ಎಲ್ಲರೂ ಎ ಯಿಂದ ಝಡ್ ಆದರೆ, ಭುಟ್ಟೋ ತದ್ವಿರುದ್ಧ. ಯಾಕೆಂದರೆ ಅವರು ಝಡ್. ಎ. ಭುಟ್ಟೋ!'

–ಬಿಲ್ಲೇಶ್ವರ ಅಚ್ಚು, ಹುಂಚ

## ಬಾಲಪುರಸ್ಕಾರಕ್ಕೆ ಅರ್ಜಿ

ಶಹಾಪುರದ ಸಂಧ್ಯಾ ಸಾಹಿತ್ಯ ವೇದಿಕೆ 18 ವರ್ಷದೊಳಗಿನ ಬರಹಗಾರರಿಗೆ ನೀಡುವ 'ವಿದ್ಯಾಸಾಗರ ಬಾಲ ಪುರಸ್ಕಾರ'ಕ್ಕೆ ಅರ್ಜಿ ಆಹ್ವಾನಿಸಿದೆ. ಬರಹಗಾರರು ಒಂದು ಸಂಕಲನಕ್ಕಾಗುವಷ್ಟು ಯಾವುದೇ ಪ್ರಕಾರದ ಪ್ರಕಟಿತ ಇಲ್ಲವೇ ಅಪ್ರಕಟಿತ ಬರಹಗಳನ್ನು ಕಳುಹಿಸಬಹುದು. ಕಳೆದ ಅಕ್ಟೋಬರ್ ನಂತರದಲ್ಲಿ ರಚಿಸಿದ ಕೃತಿಗಳಾಗಿರಬೇಕು. ವಿ ಹಿರೇಮಠ, ಅಧ್ಯಕ್ಷರು, ಸಂಧ್ಯಾ ಸಾಹಿತ್ಯ ವೇದಿಕೆ, ಅಮೃತ ನಿವಾಸ, ಸಿ.ಬಿ. ಕಮಾನಿನ ಹತ್ತಿರ, ಶಹಾಪುರ 585223 (ಯಾದಗಿರಿ ಜಿಲ್ಲೆ) ಇಲ್ಲಿಗೆ ಅಕ್ಟೋಬರ್ 15 ರೊಳಗೆ, ಜನ್ಮದಿನಾಂಕ ದೃಢೀಕರಣದೊಂದಿಗೆ ಬರಹಗಳನ್ನು ಕಳುಹಿಸಬಹುದು. ಮಾಹಿತಿಗೆ: 9448651520/ 9986590894

## ಮಳೆಯ ಲೆಕ್ಕ ಬದಲಾಯಿತೆ?

ಆಗಸ್ಟ್ 27ರ ಸಂಚಿಕೆಯಲ್ಲಿ ಆದಿತ್ಯ ಕೆ.ಎ. ಬರೆದಿರುವ 'ಮಳೆಯ ಲೆಕ್ಕ ಬದಲಾಯಿತೆ?' ಎಂಬ ಲೇಖನ ಚೆನ್ನಾಗಿ ಮೂಡಿಬಂದಿದೆ. ಈ ಸಮಸ್ಯೆಗೆ ಮುಖ್ಯವಾಗಿ ಸರ್ಕಾರ ಸಹಕಾರ ಅಗತ್ಯ.

–ನರಸಿಂಹ ರಾವ್

ಮುಖಪುಟ ಲೇಖನ ವೇದನೆ ತರುವಂತಿದೆ. ಗಾಯಗಳಿಗೆ ಮಾನವ, ಮಳೆರಾಯನ ಮುನಿಸು ಇತ್ಯಾದಿ ಕಾರಣಗಳೇನೇ ಇದ್ದರೂ, ಇದರಿಂದ ಬಳಲುತ್ತಿರುವವರು ಜನಸಾಮಾನ್ಯರು ಎಂಬುದು ಸಾರ್ವತ್ರಿಕ ಸತ್ಯ. ಈ ಗಾಯಗಳಿಗೆ ಇದುವರೆಗೂ ಮುಲಾಮು ಹಚ್ಚದೇ, ಗಾಯಗಳ ಮೇಲೆ ಮತ್ತೆ ಮತ್ತೆ ಬರೆ ಎಳೆಯುವಂತಾಗಿರುವುದು ನಿಜವಾಗಲೂ ಖಂಡನೀಯ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಕೊಡಗಿನ ದುರಂತಕ್ಕೆ ಪ್ರಕೃತಿ ವಿಕೋಪ, ಮಾನವ ನಿರ್ಮಿತ ರೆಸಾರ್ಟ್, ಗುಡ್ಡವನ್ನು ಅವೈಜ್ಞಾನಿಕವಾಗಿ ಕಡಿಯುವುದು ಎಲ್ಲವೂ ಕಾರಣ. ಲೇಖನದಲ್ಲಿ ಹಿರಿಯ ಅನುಭವಿಗಳ ಉಲ್ಲೇಖ ಗಮನಾರ್ಹವೆನಿಸಿದೆ.

–ಸೋಮಣ್ಣ ಎಸ್.ಡಿ., ವೆಂಕಟೇಶ್, ದಾವಣಗೆರೆ

## ಮರಗಳ ಅಜ್ಜ

ಆ. 27ರ ಅಗಸ್ಟ್ ಸಂಚಿಕೆಯಲ್ಲಿ ಹೆಚ್. ಎಸ್. ವಸಂತ್ ಬರೆದಿರುವ 'ಬವೋ ಬಾಬ್' ಲೇಖನ ಓದಿ ಸಂತೋಷವೂ, ಆಶ್ಚರ್ಯವೂ ಆಯಿತು. ಜೊತೆಗೆ ಹವಾಮಾನ ವೈಪರೀತ್ಯದಿಂದ ಅಳಿವಿನಂಚಿಗೆ ಹೋಗಿರುವುದು ವಿಷಾದವೇ ಸರಿ.

–ಅನಸೂಯ ತ್ರಿವಿಕ್ರಮ್ ಕೇದಿಗೆಮನೆ